## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 748 (737)
2. ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಡಾ|| ಉಮಾಶ್ರೀ (ನಾಮನಿರ್ದೇಶನ ಹೊಂದಿದವರು)
3. ಉತ್ತರಿಸುವ ಸಚಿವರು : ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು
4. ಉತ್ತರಿಸಬೇಕಾದ ದಿನಾಂಕ : 10.03.2026

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಒಟ್ಟು ಎಷ್ಟು ಹಾಪ್ ಕಾಮ್ಸ್‌ಗಳು ಇವೆ ಇದರಲ್ಲಿ ಕೆಲವು ಹಾಪ್ ಕಾಮ್ಸ್‌ಗಳನ್ನು ಮುಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇದುವರೆಗೂ ಎಷ್ಟು ಹಾಪ್ ಕಾಮ್ಸ್ ಗಳನ್ನು ಮುಚ್ಚಲಾಗಿದೆ; | ರಾಜ್ಯದಲ್ಲಿ ಒಟ್ಟು 24 ಹಾಪ್‌ಕಾಮ್ಸ್‌ಗಳು ಇವೆ. ಈ ಹಾಪ್ ಕಾಮ್ಸ್ ಗಳಡಿ 557 ಮಾರಾಟ ಮಳಿಗೆಗಳಿದ್ದು, ಅವುಗಳ ಪೈಕಿ 147 ಮಳಿಗೆಗಳನ್ನು ವಿವಿಧ ಕಾರಣಗಳಿಂದ ಮುಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ವಿವರ ಕೆಳಗಿನಂತಿದೆ. |

| ಕ್ರ. ಸಂ. | ಹಾಪ್ ಕಾಮ್ಸ್ | ತೆರೆದ ಮಳಿಗೆಗಳ ಸಂಖ್ಯೆ | ಮುಚ್ಚಲ್ಪಟ್ಟ ಮಳಿಗೆಗಳ ಸಂಖ್ಯೆ |
|---|---|---|---|
| 1 | ಬೆಂಗಳೂರು | 266 | 88 |
| 2 | ಬಾಗಲಕೋಟೆ | 1 | 0 |
| 3 | ಬೆಳಗಾವಿ | 11 | 3 |
| 4 | ಬೀದರ್ | 4 | 2 |
| 5 | ಬಳ್ಳಾರಿ | 3 | 2 |
| 6 | ಚಾಮರಾಜನಗರ | 10 | 1 |
| 7 | ಚಿತ್ರದುರ್ಗ | 19 | 2 |
| 8 | ಚಿಕ್ಕಮಗಳೂರು | 3 | 1 |
| 9 | ದಾವಣಗೆರೆ | 9 | 0 |
| 10 | ಧಾರವಾಡ | 9 | 3 |
| 11 | ಗದಗ | 7 | 0 |
| 12 | ಹಾವೇರಿ | 1 | 0 |
| 13 | ಹಾಸನ | 12 | 4 |
| 14 | ಕಲ್ಬುರ್ಗಿ | 12 | 0 |
| 15 | ಕೊಡಗು | 3 | 0 |
| 16 | ಕೊಪ್ಪಳ | 9 | 0 |
| 17 | ಮಂಡ್ಯ | 16 | 3 |
| 18 | ಮೈಸೂರು | 46 | 16 |
| 19 | ದಕ್ಷಿಣ ಕನ್ನಡ ಮತ್ತು ಉಡುಪಿ | 20 | 3 |
| 20 | ರಾಯಚೂರು | 5 | 0 |
| 21 | ಶಿವಮೊಗ್ಗ | 38 | 1 |
| 22 | ಉತ್ತರ ಕನ್ನಡ | 13 | 1 |
| 23 | ತುಮಕೂರು | 18 | 3 |
| 24 | ವಿಜಯಪುರ | 22 | 14 |
| | **ಒಟ್ಟು** | **557** | **147** |

| | | |
|---|---|---|
| ಆ) | ಹಾಪ್ ಕಾಮ್ಸ್‌ಗಳ ವಹಿವಾಟು ಸುಧಾರಣೆಗೆ ಸರ್ಕಾರ ಯಾವ ರೀತಿ ಕ್ರಮ ಕೈಗೊಂಡಿದೆ; | **ಹಾಪ್ ಕಾಮ್ಸ್‌ಗಳ ವಹಿವಾಟು ಸುಧಾರಣೆಗೆ ಕೆಳಕಾಣಿಸಿದ ಕ್ರಮ ಕೈಗೊಳ್ಳಲಾಗಿದೆ.**<br>1. ಬೆಂಗಳೂರು ಹಾಪ್‌ಕಾಮ್ಸ್ ಸಂಸ್ಥೆಯ ವಹಿವಾಟಿನ ಅಭಿವೃದ್ಧಿಗಾಗಿ 2024-25 ನೇ ಸಾಲಿನಲ್ಲಿ ರೂ. 15 ಕೋಟಿಗಳ ದುಡಿಯುವ ಬಂಡವಾಳ ನೀಡಲಾಗಿರುತ್ತದೆ.<br>2. ಹಣ್ಣು ಮತ್ತು ತರಕಾರಿಗಳನ್ನು ಸರಬರಾಜು ಮಾಡಲು ಜಿಲ್ಲಾ ಹಾಪ್‌ಕಾಮ್ಸ್‌ಗಳಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಆಇ/885/ವೆಚ್ಚ-12/2025 ದಿನಾಂಕ:23.10.2025 ರನ್ವಯ 4ಜಿ ವಿನಾಯಿತಿ ದೊರಕಿದ್ದು, ರಾಜ್ಯದಲ್ಲಿನ ಸರ್ಕಾರಿ ಇಲಾಖೆ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ, ಕೇಂದ್ರ ಕಾರಾಗೃಹ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ವಸತಿ ನಿಲಯಗಳಿಗೆ, ವಸತಿ ಶಾಲೆಗಳಿಗೆ, ಆಶ್ರಮ ಶಾಲೆಗಳಿಗೆ, ಮೊರಾರ್ಜಿ ದೇಸಾಯಿ ವಸತಿ ನಿಲಯಗಳಿಗೆ, ಸರ್ಕಾರದ ಅಧೀನದಲ್ಲಿ ಬರುವ ವಿದ್ಯಾರ್ಥಿ ನಿಲಯಗಳಿಗೆ, ಆಸ್ಪತ್ರೆಗಳಿಗೆ ಇತ್ಯಾದಿ) ವಿವಿಧ ಜಿಲ್ಲಾ ಹಾಪ್‌ಕಾಮ್ಸ್‌ಗಳ ಮುಖೇನ ಹಣ್ಣು ಮತ್ತು ತರಕಾರಿಗಳನ್ನು ಪೂರೈಸುತ್ತಿದ್ದು, ಹಾಪ್‌ಕಾಮ್ಸ್‌ಗಳ ಲಾಭದಾಯಕತೆ ಮತ್ತು ಆರ್ಥಿಕ ಸುಧಾರಣೆಗೆ ಸಹಾಯಕವಾಗಿರುತ್ತದೆ.<br>3. ಹಾಪ್‌ಕಾಮ್ಸ್‌ಗಳಲ್ಲಿ ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕಾಗಿ (ಹಣ್ಣು ಮತ್ತು ತರಕಾರಿಗಳ ಮಾರಾಟ ಮಳಿಗೆಗಳು/ಸಂಗ್ರಹಣಾ ಕೇಂದ್ರ/ಶೀಥಲಗೃಹ/ಹಣ್ಣು ಮಾಗಿಸುವ ಘಟಕ/ಪ್ಯಾಕ್ ಹೌಸ್ ಇತ್ಯಾದಿ), ಹಣ್ಣು ಮತ್ತು ತರಕಾರಿಗಳ ಸಾಗಣೆಗೆ ಮೊಬೈಲ್ ವ್ಯಾನುಗಳ ಖರೀದಿಗಾಗಿ, ಸ್ಮಾರ್ಟ್ ಬಿಲ್ಲಿಂಗ್ ಮಿಷನ್‌ಗಳ ಖರೀದಿ ಇತ್ಯಾದಿಗಳಿಗೆ ತೋಟಗಾರಿಕೆ ಇಲಾಖೆಯ ವಿವಿಧ ಯೋಜನೆಗಳಡಿ ರೂ. 55.20 ಕೋಟಿ ಅನುದಾನವನ್ನು ಹಾಪ್‌ಕಾಮ್ಸ್‌ಗಳಿಗೆ ಒದಗಿಸಲಾಗಿರುತ್ತದೆ (2008-09 ರಿಂದ 2025-26ನೇ ಸಾಲಿನವರೆಗೆ). |
| ಇ) | ಮುಚ್ಚಿರುವ ಹಾಪ್ ಕಾಮ್ಸ್ ಗಳನ್ನು ಮತ್ತೆ ಪ್ರಾರಂಭಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? | **ಮುಚ್ಚಿರುವ ಹಾಪ್‌ಕಾಮ್ಸ್ ಗಳನ್ನು ಮತ್ತೆ ಪ್ರಾರಂಭಿಸಲು ಕೆಳಕಂಡಂತೆ ಕ್ರಮ ವಹಿಸಲಾಗಿದೆ.**<br>1. ದುರಸ್ತಿಕಾರ್ಯಗಳ ಅಗತ್ಯತೆಯಿಂದ ಮುಚ್ಚಿರುವ ಮಳಿಗೆಗಳನ್ನು ನವೀಕರಣ ಮಾಡಲು ಕ್ರಮ ಕೈಗೊಂಡಿದೆ.<br>2. ರಸ್ತೆ ಅಗಲೀಕರಣದಿಂದಾಗಿ ಪ್ರಸ್ತುತ ಮುಚ್ಚಿರುವ ಹಾಪ್ ಕಾಮ್ಸ್ ಮಳಿಗೆಗಳನ್ನು ಜನಸಂದಣಿ ಇರುವ ಇತರೆ ಪ್ರದೇಶಗಳಲ್ಲಿ ತೆರೆಯಲು ಅನುಮತಿಗಾಗಿ ಮಹಾನಗರ ಪಾಲಿಕೆ/ನಗರಸಭೆ/ಜಿಲ್ಲಾಧಿಕಾರಿಗಳ ಕಛೇರಿಯೊಂದಿಗೆ ವ್ಯವಹರಿಸಲಾಗುತ್ತಿದೆ.<br>3. ಹಾಲಿ ಇರುವ ಮಾರಾಟ ಮಳಿಗೆಗಳನ್ನು ಆಧುನೀಕರಿಸಿ ಮತ್ತು ಅಲ್ಲಿನ ಬಡಾವಣೆ ನಿವಾಸಿಗಳಿಗೆ ರೈತರ ಉತ್ಪನ್ನಗಳನ್ನು ಖರೀದಿಸಿ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕ್ರಮವಹಿಸಲಾಗುತ್ತಿದೆ.<br>4. ಮುಚ್ಚಿರುವ ಹಲವು ಮಳಿಗೆಗಳಲ್ಲಿ ಹಣ್ಣಿನ ರಸಗಳ ಮಾರಾಟ ಮತ್ತು ಇತರೆ ಕೃಷಿಉತ್ಪನ್ನಗಳಾದ ಸಿರಿಧಾನ್ಯಗಳು ವಿವಿಧ ಕಾಳುಗಳು ಎಣ್ಣೆಗಳನ್ನು ಮಾರಾಟ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. |

**ಸಂಖ್ಯೆ: HORTI 102 HGM 2026**

**(ಎಸ್. ಎಸ್. ಮಲ್ಲಿಕಾರ್ಜುನ್)**
**ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು**